# ಸೈಫಿ ಎಂಬ ಫೀನಿಕ್ಸ್

ವಿಶ್ವವನ್ನೇ ಗೆದ್ದ 'ಸ್ಟಂಟ್ ಮಾಸ್ಟರ್' ಸೈಫಿ ವಿಲಿಯಂ ಈಗ ರೆಕ್ಕೆ ಮುರಿದ ಹಕ್ಕಿ! ಆದರೆ ಎರಡೂ ಕಾಲುಗಳನ್ನು ಕಳೆದುಕೊಂಡರೂ ಇವರದ್ದು ಬತ್ತದ ಉತ್ಸಾಹ!

■ ಯೋಗೇಶ್ ಮಾರೇನಹಳ್ಳಿ
ಚಿತ್ರ: ಎಂ.ಆರ್.ಮಂಜುನಾಥ್



ಸರ್ಕಸ್‌ನಲ್ಲಿ ಸ್ಟಂಟ್ ಮಾಸ್ಟರ್ ಆಗಿ 25ಕ್ಕೂ ಹೆಚ್ಚು ದೇಶ ಸುತ್ತಿದ, ಇಟಲಿಯ ಫೆರಾರಿ ಕಂಪೆನಿಯ ನೂರಾರು ಐಷಾರಾಮಿ ಕಾರುಗಳಿಗೆ ರೂಪ ಕೊಟ್ಟ ಸೈಫಿ ವಿಲಿಯಂ ಈಗ ಹುಬ್ಬಳ್ಳಿಯಲ್ಲಿ ಎರಡೂ ಕಾಲು ಕಳೆದುಕೊಂಡು ಟ್ರೈಸಿಕಲ್ ಮೇಲೆ ಜೀವನ ದೂಡುತ್ತಿದ್ದಾರೆ!

ಮುಸ್ಲಿಂ ತಾಯಿ, ಕ್ರಿಶ್ಚಿಯನ್ ತಂದೆಯ ಮಗನಾದ ಸೈಫಿ ವಿಲಿಯಂ 1977ರಲ್ಲಿ ನಡೆದ ಇರಾನ್ ಯುದ್ಧದಲ್ಲಿ ನಿರಾಶ್ರಿತರಾಗಿದ್ದವರು. ಯುದ್ಧ ಪೀಡಿತ ಇರಾನ್‌ನಿಂದ ತಪ್ಪಿಸಿಕೊಂಡು ತುರ್ಕಿಸ್ತಾನ್ ಗಡಿಯಲ್ಲಿ ಅನ್ನ–ನೀರು ಇಲ್ಲದೆ 8 ಎಂಟು ದಿನ ಕಳೆದಿದ್ದರು. ಇಸ್ತಾಂಬುಲ್‌ನ ನಿರಾಶ್ರಿತರ ಕ್ಯಾಂಪ್‌ನಲ್ಲಿ 15 ದಿನ ಕಳೆದ ಅವರು ಹೇಗೋ ಬಲ್ಗೇರಿಯಾ ತಲುಪಿದ್ದರು.

ಬಲ್ಗೇರಿಯಾದ ಬೀದಿ ಅಲೆಯುತ್ತಿದ್ದ ಸೈಫಿಗೆ ಸರ್ಕಸ್ ಪೋಸ್ಟರ್ ಕಣ್ಣಿಗೆ ಬಿದ್ದಿತ್ತು. ಅದರ ಬೆನ್ನು ಹತ್ತಿ ಹೋದಾಗ ಸಾಹಸ ಕಲಾ ಲೋಕ ಅವರೆದುರು ತೆರೆದುಕೊಂಡಿತ್ತು. ಅವರ ಸ್ಟಂಟ್‌ಗಳಿಗೆ ಮನಸೋತ ಸರ್ಕಸ್ ಕಂಪನಿ ಮಾಲೀಕರು ಅವರನ್ನು ಇಟಲಿಗೆ ಕರೆದೊಯ್ದರು. ಇಟಲಿಯ ಹಳ್ಳಿ, ಪಟ್ಟಣ, ನಗರಗಳಲ್ಲಿ ಸೈಫಿ ಮನೆ ಮಾತಾದರು. ಬೈಕ್ ಜೊತೆಗೆ ಕಾರನ್ನೂ ಹತ್ತಿದರು. ಅಷ್ಟೇ ಅಲ್ಲ, ಆನೆ, ಹುಲಿ, ಸಿಂಹವನ್ನೂ ಪಳಗಿಸುವ ಕಲಾವಿದರಾದರು. ತಮಗೆ ಬೇಕಾದ ಕಾರು, ಬೈಕ್‌ಗಳನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು. ಇಟಲಿಯ ಪ್ರಸಿದ್ಧ 'ಓರಾ ಆರ್ ಫೈ' ಸರ್ಕಸ್ ಕಂಪನಿಯಲ್ಲಿ ಕಲಾವಿದರಾಗಿದ್ದ ಅವರು ಜರ್ಮನಿ, ಸ್ವಿಝರ್ಲಂಡ್, ಸ್ಪೇನ್, ಫ್ರಾನ್ಸ್, ಯುಎಸ್ಎ, ದುಬೈ, ಬಹರೇನ್ ಸೇರಿ 25ಕ್ಕೂ ಹೆಚ್ಚು ದೇಶಗಳನ್ನು ಸುತ್ತಿದವರು.

## ಫೆರಾರಿ ಕಂಪೆನಿಯಲ್ಲಿ...

ಇಟಲಿಯ 'ಸ್ಟಂಟ್ ಕಾರ್ ಸರ್ಕಸ್ ಕಂಪನಿ' ಸೇರಿ ಕಲಾವಿದನಾಗಿದ್ದ ಸೈಫಿ